# ಶ್ರೀವಿಷ್ಣುತೀರ್ಥಸ್ತುತಿಸಾರೋದ್ಧಾರಃ



ಕನ್ನಡ ಅನುವಾದ

ವಾದಿರಾಜಾಚಾರ್ಯ ಕರಣಮ್

ಪ್ರಕಾಶನ

ವಿಶ್ವಮಧ್ವಮಹಾಪರಿಷತ್, ಉತ್ತರಾದಿಮಠ, ಬೆಂಗಳೂರು.

# ಶ್ರೀವಿಷ್ಣುತೀರ್ಥರು

## ಮೋದಾಪುರೀ (ಮಾದಿನೂರು)



ವಿಷ್ಣುತೀರ್ಥಃ ಕಲ್ಪವೃಕ್ಷೋ ವಿಷ್ಣುತೀರ್ಥಶ್ಚ ಕಾಮಧುಕ್ ।
ಚಿಂತಾಮಣಿರ್ವಿಷ್ಣುತೀರ್ಥೋ ಯತೀಂದ್ರಃ ಸರ್ವಕಾಮದಃ ॥

Rarest Archiver

## ॥ ಶ್ರೀವಿಷ್ಣುತೀರ್ಥಸ್ತುತಿಸಾರೋದ್ಧಾರಃ ॥

ಶ್ರೀವಿಷ್ಣುತೀರ್ಥಂ ಭಜತಾಂ ಸುಖಾರ್ಥಂ
ಪ್ರದತ್ತಸರ್ವಾರ್ಥಮಮುಂ ಸಮರ್ಥಮ್ ।
ಕಾರುಣ್ಯಪಾತ್ರಂ ಕಮನೀಯಗಾತ್ರಂ
ಭಜಾಮಿ ಜೈತ್ರಂ ಗದವೀತಿಹೋತ್ರಮ್ ॥1॥

ಪುರಗ್ರಾಮದ್ವೀಪರಾಷ್ಟ್ರಾಧಿಪತ್ಯಂ
ಖಂಡಾಧಿಪತ್ಯಂ ಲಭತೇ ಯತ್ಪ್ರಸಾದಾತ್ ।
ಸೇನಾಧಿಪತ್ಯಂ ಚ ಜನಃ ಸ್ವಯೋಗ್ಯಂ
ತಂ ವಿಷ್ಣುತೀರ್ಥಂ ಪ್ರಣಮಾಮಿ ಮೂರ್ಧ್ನಾ ॥2॥

ಯಂ ಯಂ ಜನಃ ಕಾಮಯತೇ ಪುಮರ್ಥಂ
ಬಾಹ್ಯಂ ತಥಾಽಭ್ಯಂತರಮಪ್ಯಶೇಷಮ್ ।
ಶ್ರೀವಿಷ್ಣುತೀರ್ಥಂ ಸಮುಪಾಸ್ಯ ಸರ್ವಂ,
ಲಭೇತ ದೇವೋ ದಿವಿಜದ್ರುಮಂ ಯಥಾ ॥3॥

ಸ್ವಭಕ್ತಸಂತಾಪದುರಿಷ್ಟಹಂತಾ
ಸ್ವಭಕ್ತಸಂವಾಂಛಿತಸರ್ವದಾತಾ ।
ಸನ್ಯಸ್ಯ ಬುದ್ಧ್ಯಾ ಚ ಸದೈವ ದೀಪ್ಯತೇ
ಯೋ ವಿಷ್ಣುತೀರ್ಥೋಽಹಮಮುಂ ಭಜಾಮಿ ॥4॥

ಕೌಪೀನದಂಡಾಜಿನಪಾದಪೀಠ-
ಕಮಂಡಲುಂ ಸತ್ಕಮಠಾಸನಸ್ಥಮ್ ।
ಇತ್ಥಂ ಯತಿಂ ಚಿಂತಯತಃ ಪುಮರ್ಥಂ
ನಿತ್ಯಂ ದಿಶಂತಂ ಗುರುವಿಷ್ಣುತೀರ್ಥಮ್ ॥5॥

ಯಸ್ಯಪ್ರಚಂಡತಪಸಾ ಶ್ರುತಿಗೀತವೃತ್ತ-

Rarest Archives

ಸ್ತುಷ್ಟೋ ಹರಿಃ ಕಿಲ ವಶಂವದತಾಮವಾಪ ।
ಶ್ರೀಮಧ್ವಸನ್ಮತಪಯೋನಿಧಿಪೂರ್ಣಚಂದ್ರಃ
ಶ್ರೀವಿಷ್ಣುತೀರ್ಥಮುನಿರಾಣ್ಮುದಮಾತನೋತು ॥6॥

ಇದಂ ಸ್ತೋತ್ರಂ ಪಠನ್ನರ್ಚನ್ನಮನ್ ವೃಂದಾವನಂ ಗುರೋಃ ।
ತ್ರಿವಾರಂ ಲಭತೇ ಕಾಮಾನ್ ಸರ್ವಾನ್ ನಾರ್ಯಥವಾ ಪುಮಾನ್ ॥

ಇತಿ ಶ್ರೀಕೃಷ್ಣಾರ್ಯಕೃತ ಶ್ರೀಮದ್ವಿಷ್ಣುತೀರ್ಥಗುರುಸ್ತೋತ್ರಮ್ ॥



Rarest Archiver

## ॥ ಶ್ರೀವಿಷ್ಣುತೀರ್ಥಸ್ತುತಿಸಾರೋದ್ಧಾರಃ ॥

ಆಪಾದಮೌಲಿಪರ್ಯಂತಂ ವಿಷ್ಣುತೀರ್ಥಾಕೃತಿಂ ಮುಹುಃ ।
ಮನಸಾ ಸಂಸ್ಮರನ್ ಮರ್ತ್ಯಃ ಸರ್ವಸ್ಮಾತ್ ಮುಚ್ಯತೇ ಭಯಾತ್ ॥

ವಿಷ್ಣುತೀರ್ಥಃ ಕಲ್ಪವೃಕ್ಷೋ ವಿಷ್ಣುತೀರ್ಥಶ್ಚ ಕಾಮಧುಕ್ ।
ಚಿಂತಾಮಣಿರ್ವಿಷ್ಣುತೀರ್ಥೋ ಯತೀಂದ್ರಃ ಸರ್ವಕಾಮದಃ ॥2॥

ಸರ್ವೇಂದ್ರಿಯಾಣಾಂ ವಿಜಯೋ ಮನಸಾ ಸಹ ಜಾಯತೇ ।
ಶ್ರೀವಿಷ್ಣುತೀರ್ಥಚರಣಸೇವನಾತ್ ಸ್ಮರಣಾದಪಿ ॥3॥

ಭವಂತಿ ವಿಷ್ಣುವಿಷಯಾ ಮನೋವಾಕ್ಕಾಯವೃತ್ತಯಃ ।
ವಿಷ್ಣುತೀರ್ಥಪ್ರಸಾದೇನ ಸಹಾನ್ಯೇಂದ್ರಿಯವೃತ್ತಿಭಿಃ ॥4॥

ಏಡಮೂಕೋಽಪಿ ವಾಗ್ಮಿತ್ವಂ ಜಡೋಽಪಿ ಪ್ರಾಜ್ಞಮೌಲಿತಾಮ್ ।
ಯತ್ಕೃಪಾಲೇಶತೋ ಯಾತಿ ವಿಷ್ಣುತೀರ್ಥಂ ತಮಾಶ್ರಯೇ ॥5॥

ಶಿಷ್ಯಪ್ರಶಿಷ್ಯಾತಿಶಯಾ ವಿಷ್ಣುತೀರ್ಥದಯೋದಯಾತ್ ।
ಪ್ರಭವಂತಿ ಸದೈವೈತಂ ಕೋ ನ ಸೇವೇತ ಬುದ್ಧಿಮಾನ್ ॥6॥

ಪಶುದಾಸೀಭೃತ್ಯವರ್ಗಾ ವಿಷ್ಣುತೀರ್ಥದಯೋದಯಾತ್ ।
ಪ್ರಭವಂತಿ ಸದೈವೈತಂ ಕೋ ನ ಸೇವೇತ ಬುದ್ಧಿಮಾನ್ ॥7॥

ಸರ್ವಪ್ರೇಮಾಸ್ಪದತ್ವಾದ್ಯಾ ವಿಷ್ಣುತೀರ್ಥದಯೋದಯಾತ್ ।
ಪ್ರಭವಂತಿ ಸದೈವೈತಂ ಕೋ ನ ಸೇವೇತ ಬುದ್ಧಿಮಾನ್ ॥8॥

ಶತ್ರವೋ ಮಿತ್ರತಾಂ ಯಾಂತಿ ಪ್ರಭವೋಽಪಿ ವಿನೇಯತಾಮ್ ।
ವಿಷ್ಣುತೀರ್ಥಪ್ರಸಾದಾತ್ತಂ ಕೋ ನ ಸೇವೇತ ಬುದ್ಧಿಮಾನ್ ॥9॥

ಸತ್ಯಂ ಸತ್ಯಂ ಪುನಃ ಸತ್ಯಂ ವಿಷ್ಣುತೀರ್ಥಪ್ರಸಾದತಃ ।
ಸರ್ವೇ ಕಾಮಾ ಭವಂತ್ಯೇವ ಶಪಥೋ ಬಿಂಬಸನ್ನಿಧೌ ॥10॥

Rarest Archiver

ಇದಂ ಸ್ತೋತ್ರಂ ಪಠನ್ನರ್ಚನ್ನಮನ್ ವೃಂದಾವನಂ ಗುರೋಃ ।
ತ್ರಿವಾರಂ ಲಭತೇ ಕಾಮಾನ್ ಸರ್ವಾನ್ ನಾರ್ಯಥವಾ ಪುಮಾನ್ ॥11॥

ಇತಿ ಶ್ರೀಕೃಷ್ಣಾರ್ಯಕೃತ ಶ್ರೀಮದ್ವಿಷ್ಣುತೀರ್ಥಗುರುಸ್ತೋತ್ರಮ್ ॥



Rarest Archiver

## ॥ ಶ್ರೀವಿಷ್ಣುತೀರ್ಥಸ್ತುತಿಸಾರೋದ್ಧಾರಃ ॥

ಶ್ರೀವಿಷ್ಣುತೀರ್ಥಂ ಭಜತಾಂ ಸುಖಾರ್ಥಂ
ಪ್ರದತ್ತಸರ್ವಾರ್ಥಮಮುಂ ಸಮರ್ಥಮ್ ।
ಕಾರುಣ್ಯಪಾತ್ರಂ ಕಮನೀಯಗಾತ್ರಂ
ಭಜಾಮಿ ಜೈತ್ರಂ ಗದವೀತಿಹೋತ್ರಮ್ ॥1॥

ಪದಚ್ಛೇದಃ- ಶ್ರೀವಿಷ್ಣುತೀರ್ಥಂ ಭಜತಾಂ ಸುಖಾರ್ಥಂ ಪ್ರದತ್ತಸರ್ವಾರ್ಥಂ ಅಮುಂ ಸಮರ್ಥಂ ಕಾರುಣ್ಯಪಾತ್ರಂ ಕಮನೀಯಗಾತ್ರಂ ಭಜಾಮಿ ಜೈತ್ರಂ ಗದವೀತಿಹೋತ್ರಮ್ ॥1॥

ಅನ್ವಯಾರ್ಥಃ- **ಭಜತಾಂ** ಸೇವಿಸುವವರ **ಸುಖಾರ್ಥಂ** ಸುಖಕ್ಕಾಗಿ **ಪ್ರದತ್ತಸರ್ವಾರ್ಥಂ** ಎಲ್ಲ ಅಭೀಷ್ಟಗಳನ್ನು ಪೂರೈಸಿದ **ಸಮರ್ಥಂ** ಸಮರ್ಥರಾದ **ಕಾರುಣ್ಯಪಾತ್ರಂ** ಕಾರುಣ್ಯ ತುಂಬಿದ **ಕಮನೀಯ-ಗಾತ್ರಂ** ಮನೋಹರವಾದ ದೇಹದಿಂದ ವಿರಾಜಿತರಾದ **ಜೈತ್ರಂ** ಜಯಶಾಲಿಗಳಾದ **ಗದವೀತಿಹೋತ್ರಂ** ರೋಗಗಳಿಗೆ ಅಗ್ನಿಯಂತೆ ನಾಶಕರಾದ **ಅಮುಂ** **ಶ್ರೀವಿಷ್ಣುತೀರ್ಥಂ** ವೈರಾಗ್ಯ ಸಂಪನ್ನರಾದ ವಿಷ್ಣುತೀರ್ಥರನ್ನು **ಭಜಾಮಿ** ಸೇವಿಸುತ್ತೇನೆ. ॥1॥

### ಶ್ರೀವಿಷ್ಣುತೀರ್ಥಂ

ಶ್ರೀವಿಷ್ಣುತೀರ್ಥರು ಜಯತೀರ್ಥಾಚಾರ್ಯರೆಂದು ಪೂರ್ವಾಶ್ರಮದಲ್ಲಿ ಪ್ರಸಿದ್ಧರಾಗಿದ್ದರು. ಇವರು ಸುಪ್ರಸಿದ್ಧ

Rarest Archive

ವಿದ್ವದ್ವರೇಣ್ಯರಾದ ಐಜಿ ಶ್ರೀವೇಂಕಟರಾಮಾಚಾರ್ಯರಲ್ಲಿ ಅಧ್ಯಯನ ಮಾಡಿದರು. ನಂತರ ಈ ಐಜಿ ವೇಂಕಟರಾಮಾಚಾರ್ಯರು ಶ್ರೀವ್ಯಾಸತತ್ತ್ವಜ್ಞರಾದರು. ಅನೇಕ ಅದ್ಭುತವಾದ ಗ್ರಂಥಗಳನ್ನು ರಚಿಸಿದರು.

ಸಮಗ್ರ ಶಾಸ್ತ್ರಗಳ ಅಧ್ಯಯನ ಮಾಡಿದ ಈ ಜಯತೀರ್ಥಾಚಾರ್ಯರು ತಮ್ಮ ಕುಲಗುರುಗಳಾದ, ಉತ್ತರಾದಿಮಠಾಧೀಶರಾದ ಶ್ರೀ1008ಶ್ರೀ ಸತ್ಯವರತೀರ್ಥರಿಂದ ಆಶ್ರಮವನ್ನು ಸ್ವೀಕರಿಸಿದರು. ಶ್ರೀಸತ್ಯವರರು ಇವರಿಗೆ ಪ್ರಣವೋಪದೇಶವನ್ನು ಮಾಡಿ ಸನ್ನ್ಯಾಸವನ್ನು ನೀಡಿದರು. ಹರಿಸರ್ವೋತ್ತಮತ್ವವನ್ನು ಪ್ರತಿಪಾದಿಸೆಂದು ಆಜ್ಞಾಪಿಸಿದರು. ವಿಷ್ಣುತೀರ್ಥ ಎಂದು ಹೆಸರಿಸಿದರು. ಕರುಣೆಯಿಂದ ಇವರನ್ನು ಹರಿಸಿದರು.

ಶ್ರೀವಿಷ್ಣುತೀರ್ಥರು ಗುರುಗಳಾದ ಶ್ರೀಸತ್ಯವರರ ಅನುಗ್ರಹವನ್ನು ಪರಿಪೂರ್ಣವಾಗಿ ಪಡೆದರು. ನಂತರ ತಮ್ಮ ಸಾಧನೆಯಲ್ಲಿ ತತ್ಪರರಾದರು.

**ಸುಖಾರ್ಥಂ ಭಜತಾಂ ಪ್ರದತ್ತಸರ್ವಾರ್ಥಂ**

ಶಿಷ್ಯರಿಗೆ ಶ್ರೀಮನ್ನ್ಯಾಯಸುಧಾ ಮುಂತಾದ ಪಾಠಗಳನ್ನು ಹೇಳುತ್ತಾ, ಸಜ್ಜನರಿಗೆ ತತ್ತ್ವೋಪದೇಶವನ್ನು ಮಾಡುತ್ತಾ ಸಂಚಾರವನ್ನು ಪ್ರಾರಂಭಿಸಿದರು. ಅವರನ್ನು ಭಜಿಸಿದ ಸಕಲ ಸಜ್ಜನರಿಗೆ ಎಲ್ಲ ಇಷ್ಟಾರ್ಥಗಳನ್ನು ನೀಡಿದರು.

Rarest Archiver

## ಸಮರ್ಥಂ ಅಮುಂ

ವಿಷಯಗಳನ್ನು ಸಂಪಾದಿಸಲಾಗದೇ ಜಯತೀರ್ಥಾಚಾರ್ಯರು ಯತಿಗಳಾಗಲಿಲ್ಲ. ವಿಷಯಗಳು ಹೇರಳವಾಗಿ ಇದ್ದರೂ, ವಿಹಿತವಾದ ವಿಷಯಗಳನ್ನು ಭೋಗಮಾಡುವ ಯೋಗ್ಯತೆ-ಸಾಮರ್ಥ್ಯಗಳು ಇದ್ದರೂ ವಿಷಯಗಳನ್ನು ತೊರೆದರು. ಆದರೇ ಇನ್ನೂ ವಿಷಯಗಳಲ್ಲಿಯೇ ಆಸಕ್ತ-ರಾಗಿರುವ ಭಗವದ್ಭಕ್ತರನ್ನು ಉದ್ಧರಿಸುವುದಕ್ಕಾಗಿ ಅವರ ಎಲ್ಲ ಅಭೀಷ್ಟಗಳನ್ನು ಪೂರೈಸಿದರು. ಸಕಲವಿಧವಾದ ಅಭೀಷ್ಟಗಳನ್ನು ಪೂರೈಸುವ ಅವರ ಸಾಮರ್ಥ್ಯ ಕುಗ್ಗಲಿಲ್ಲ.

108 ಬಾರಿ ಶ್ರೀಮನ್ನ್ಯಾಯಸುಧಾ ಪಾಠವನ್ನು ಹೇಳಿದ ಅವರ ಸಾಮರ್ಥ್ಯ ಅತ್ಯಂತ ಅಪರೂಪವಾದದ್ದು. ಈ ಸುಧೆಯ ಪಾನದಿಂದಲೇ ಅವರು ಸಮರ್ಥರಾದರು.

## ಕಾರುಣ್ಯಪಾತ್ರಂ

ಕಾರುಣ್ಯತುಂಬಿದ ಅಕ್ಷಯಪಾತ್ರೆ ಶ್ರೀವಿಷ್ಣುತೀರ್ಥರು. ಸಾವಿರಾರು ಭಕ್ತರಿಗೆ ಕರುಣೆಯ ದಾನ ಮಾಡಿದರೂ ಆ ಪಾತ್ರೆಯಲ್ಲಿಯ ಕರುಣೆ ಬರಿದಾಗಲಿಲ್ಲ. ಬತ್ತಿ ಹೋಗಲಿಲ್ಲ. ಮತ್ತಿಷ್ಟು ತುಂಬಿತು. ತುಳುಕಿತು.

## ಕಮನೀಯಗಾತ್ರಂ

ಅಂಗವು ಗಲಿತವಾಗಿ, ಮುಂಡವು ಪಲಿತವಾಗಿ, ಹಲ್ಲುಗಳೆಲ್ಲ ಬಿದ್ದುಹೋಗಿ ಕೋಲು ಹಿಡಿಯುವ

Rarest Archiver

ವಯಸ್ಸಿನಲ್ಲಿ ಜಯತೀರ್ಥಾಚಾರ್ಯರು ದಂಡಧಾರಿ-ಗಳಾಗಲಿಲ್ಲ. ದೇಹವು ಇನ್ನೂ ಕಮನೀಯವಾಗಿ, ಮನೋಹರವಾಗಿ ಇರುವಾಗಲೇ ಆ ದೇಹದ ಮೇಲೆ ಮಮತೆಯನ್ನು ಪರಿತ್ಯಜಿಸಿದ ಧೀರರು ಶ್ರೀವಿಷ್ಣುತೀರ್ಥರು.

ಈ ವಿಷಯವನ್ನು ತಿಳಿಸಲೆಂದೇ ಕಮನೀಯಗಾತ್ರಂ ಎಂದು ಸಂಬೋಧಿಸಿದ್ದಾರೆ. ಅಂದ-ಚಂದಗಳಿಂದ ಅವರ ದೇಹವು ಕಂಗೊಳಿಸುತ್ತಿತ್ತು . ಇಂಥ ಪ್ರಾಯದಲ್ಲಿಯೇ ಶರೀರದ ಮೇಲೆ ಮಮತೆಯನ್ನು ಕಳೆದುಕೊಂಡ ಧೀರರು ಶ್ರೀವಿಷ್ಣುತೀರ್ಥರು.

**ಗದವೀತಿಹೋತ್ರಂ ಜೈತ್ರಂ ಭಜಾಮಿ**

ರೋಗಗಳಿಗೆ ಅಗ್ನಿಯಂತೆ ಇದ್ದ ಜಯಶಾಲಿಗಳು ಶ್ರೀವಿಷ್ಣುತೀರ್ಥರು. ಸಂಸಾರರೋಗದ ಪರಿಹಾರಕ್ಕಾಗಿ ಅವರನ್ನು ಅಂಗಲಾಚಿ ಭಜಿಸುತ್ತೇನೆ.

ಅಧ್ಯಯನ ಮಾಡುವವರೆಂದರೇ ಶ್ರೀವಿಷ್ಣುತೀರ್ಥರಿಗೆ ತುಂಬ ಪ್ರೀತಿ. ಅವರಿಗಾಗಿ ಏನು ಮಾಡಲೂ ಸಿದ್ಧರಿದ್ದರು. ತಮ್ಮ ಪೂರ್ವಾಶ್ರಮದ ಪುತ್ರನೂ ತಮ್ಮಲ್ಲಿಯೇ ಅಧ್ಯಯನ ಮಾಡುತ್ತಿದ್ದರು. ಅವರ ಶುಭನಾಮ ಕೃಷ್ಣಾಚಾರ್ಯರು. ಅವರಿಗೆ ಅಕಾಲಮೃತ್ಯುವಿದೆ ಎಂದು ಶ್ರೀವಿಷ್ಣುತೀರ್ಥ-ರಿಗೆ ತಿಳಿದು ಬಂತು. ಅದನ್ನು ಗಮನಿಸಿದರು. ತಮ್ಮ ಶಿಷ್ಯರಿಗೆ ಹೇಳಿದರು.

Rarest Archiver

ನಮ್ಮ ಐದಾರು ಜನ ಶಿಷ್ಯರಲ್ಲಿ ಒಬ್ಬರಿಗೆ ಅಕಾಲಮೃತ್ಯು ಒದಗಿ ಬರಲಿದೆ. ಅದರ ಪರಿಹಾರಕ್ಕಾಗಿ ನಾನು ಮೂರು ದಿವಸ ಉಪವಾಸ ಮಾಡುತ್ತೇನೆ. ನಾನು ಮಾಡಿದ ಆ ಉಪವಾಸದ ಫಲವನ್ನು ಆ ಶಿಷ್ಯನಿಗೆ ನೀಡುತ್ತೇನೆ. ಆತನನ್ನು ಬದುಕಿಸುತ್ತೇನೆ. ಶ್ರೀಮದಾ-ಚಾರ್ಯರ ಶಾಸ್ತ್ರವನ್ನು ಅಧ್ಯಯನ ಮಾಡುವವರು ಚಿರಕಾಲ ಬಾಳಬೇಕು. ಈ ಸಮಾಜವನ್ನು ಉದ್ಧರಿಸಬೇಕು. ಆದ್ದರಿಂದ ನನಗಾಗಿ ಯಾರೂ ಕಾಯಬೇಡಿರಿ. ನನಗಾಗಿ ಭಿಕ್ಷೆಯನ್ನೂ ಸಿದ್ಧಪಡಿಸಬಾರದೆಂದು ಆಜ್ಞಾಪಿಸಿದರು.

ಅಪಮೃತ್ಯುವಿಗೆ ಸಿಲುಕುವ ಆ ವ್ಯಕ್ತಿ ಯಾರು? ಎಂಬ ಜಿಜ್ಞಾಸೆ ಈಗ ಬೇಡ. ತಾನಾಗಿಯೇ ಅದು ಎಲ್ಲರಿಗೂ ತಿಳಿದು ಬರುತ್ತದೆ. ಎಂದು ಹೇಳಿದರು. ಉಪವಾಸ-ವ್ರತವನ್ನು ಕೈಗೊಂಡರು. ಮೂರು ದಿನದ ಉಪವಾಸದಿಂದ ಅವರಲ್ಲಿ ಯಾವುದೇ ಬಳಲಿಕೆಯು ಕಾಣಲಿಲ್ಲ. ಆ ಮೂರು ದಿನದಲ್ಲಿಯೂ ವಿಶೇಷವಾಗಿ ಶ್ರೀಮನ್ನ್ಯಾಯಸುಧೆಯ ಪಾಠದಲ್ಲಿಯೇ ಕಾಲ ಕಳೆದರು. ಆದರೂ ಅವರಿಗೆ ಶ್ರಮವೆನಿಸಲಿಲ್ಲ. ಸುಧೆಯ ಪಾನ ಮಾಡಿದ್ದಕ್ಕಾಗಿ ತುಂಬು ಉತ್ಸಾಹದ ಚಿಲುಮೆಯಾದರು. ಮೂರು ದಿನವಾದ ಮೇಲೆ ತಮ್ಮ ಪೂರ್ವಾಶ್ರಮದ ಪುತ್ರರಾದ ಕೃಷ್ಣಾಚಾರ್ಯರು ಓಡಿ ಓಡಿ ಬಂದರು. ಗುರುಗಳಾದ ವಿಷ್ಣುತೀರ್ಥರಿಗೆ ಸಾಷ್ಟಾಂಗವೆರಗಿದರು. ತಮಗೆ ಒದಗಿ ಬಂದ ಅಪಮೃತ್ಯುವನ್ನು ವಿವರಿಸಿದರು. ಆ ಅಪಮೃತ್ಯುವನ್ನು

Rarest Archiver

ವಿಷ್ಣುತೀರ್ಥರು ಪರಿಹರಿಸಿದ ಬಗೆಯನ್ನು ತಿಳಿದು ಗುರುಗಳಲ್ಲಿ ಮತ್ತಿಷ್ಟು ಭಕ್ತಿಯನ್ನು ಬೆಳೆಸಿಕೊಂಡರು. ಹೀಗೆ ಅಪಮೃತ್ಯುವೇ ಮುಂತಾದ ರೋಗಗಳನ್ನು ಪರಿಹರಿಸುವ ಸಮರ್ಥರು ಶ್ರೀವಿಷ್ಣುತೀರ್ಥರು. ಇಂಥ ವಿಷ್ಣುತೀರ್ಥರನ್ನು ಭಕ್ತಿಯಿಂದ ಭಜಿಸುತ್ತೇನೆ.

ಪುರಗ್ರಾಮದ್ವೀಪರಾಷ್ಟ್ರಾಧಿಪತ್ಯಂ
ಖಂಡಾಧಿಪತ್ಯಂ ಲಭತೇ ಯತ್ಪ್ರಸಾದಾತ್ ।
ಸೇನಾಧಿಪತ್ಯಂ ಚ ಜನಃ ಸ್ವಯೋಗ್ಯಂ
ತಂ ವಿಷ್ಣುತೀರ್ಥಂ ಪ್ರಣಮಾಮಿ ಮೂರ್ಧ್ನಾ ॥2॥

ಪದಚ್ಛೇದಃ- ಪುರಗ್ರಾಮದ್ವೀಪರಾಷ್ಟ್ರಾಧಿಪತ್ಯಂ ಖಂಡಾಧಿಪತ್ಯಂ ಲಭತೇ ಯತ್ಪ್ರಸಾದಾತ್ ಸೇನಾಧಿಪತ್ಯಂ ಚ ಜನಃ ಸ್ವಯೋಗ್ಯಂ ತಂ ವಿಷ್ಣುತೀರ್ಥಂ ಪ್ರಣಮಾಮಿ ಮೂರ್ಧ್ನಾ ॥2॥

ಅನ್ವಯಾರ್ಥಃ- **ಜನಃ** ಜನರು **ಸ್ವಯೋಗ್ಯಂ** ತಮ್ಮ ಯೋಗ್ಯತೆಗೆ ಅನುಗುಣವಾದ **ಪುರಗ್ರಾಮದ್ವೀಪ-ರಾಷ್ಟ್ರಾಧಿಪತ್ಯಂ** ಪುರಾಧಿಪತ್ಯ, ಗ್ರಾಮಾಧಿಪತ್ಯ, ದ್ವೀಪಾಧಿಪತ್ಯ ಮತ್ತು ರಾಷ್ಟ್ರಾಧಿಪತ್ಯಗಳನ್ನು **ಖಂಡಾಧಿ-ಪತ್ಯಂ** ಖಂಡಾಧಿಪತ್ಯವನ್ನು **ಚ** ಮತ್ತು **ಸೇನಾಧಿಪತ್ಯಂ** ಸೇನಾಧಿಪತ್ಯವನ್ನು ಕೂಡಾ **ಯತ್ಪ್ರಸಾದಾತ್** ಯಾವ ವಿಷ್ಣುತೀರ್ಥರ ಅನುಗ್ರಹದಿಂದ **ಲಭತೇ** ಪಡೆಯುತ್ತಾರೋ **ತಂ ವಿಷ್ಣುತೀರ್ಥಂ** ಅಂಥ ವಿಷ್ಣು-

Rarest Archiver

ತೀರ್ಥರನ್ನು **ಮೂರ್ಧ್ನಾ** ಶಿರಸ್ಸಿನಿಂದ **ಪ್ರಣಮಾಮಿ** ನಮಸ್ಕರಿಸುತ್ತೇನೆ. ॥2॥

ತಾತ್ಪರ್ಯ- ಹಲವರ ಅಪೇಕ್ಷೆ ಹಲವು. ಅವರವರ ಯೋಗ್ಯತೆಗೆ ಅನುಗುಣವಾದ ಅಪೇಕ್ಷೆಗಳನ್ನು ಪ್ರಾರ್ಥಿಸುವುದು ಕೂಡಾ ಯೋಗ್ಯವೇ ಆಗಿದೆ. ಅಂಥ ಅಭೀಷ್ಟಗಳೇ ಗ್ರಾಮಾಧಿಪತ್ಯ, ಪುರಾಧಿಪತ್ಯ, ದ್ವೀಪಾಧಿ - ಪತ್ಯ, ರಾಷ್ಟ್ರಾಧಿಪತ್ಯ, ಖಂಡಾಧಿಪತ್ಯ, ಸೇನಾಧಿಪತ್ಯ ಮುಂತಾದವುಗಳು. ಈ ಅಭೀಷ್ಟಗಳನ್ನು ಪಡೆದು, ಆಯಾ ಪದವಿಗಳನ್ನು ಅನುಭವಿಸುತ್ತಾ ಶ್ರೀಹರಿಯ ಆರಾಧನೆ-ಯನ್ನು ಮಾಡಲು ಬಯಸುವ ಭಕ್ತರು ಅನೇಕರು. ಅವರೆಲ್ಲರೂ ತಮ್ಮ ಈ ಬಯಕೆಗಳನ್ನು ಶ್ರೀವಿಷ್ಣು-ತೀರ್ಥರಿಂದ ಪೂರ್ಣಗೊಳಿಸಿಕೊಳ್ಳಲು ಹವಣಿಸಿದರು. ಅವರನ್ನು ಆರಾಧಿಸಿದರು. ಗುರುಗಳ ಪ್ರಸಾದದಿಂದ ಎಲ್ಲ ಅಭೀಷ್ಟಗಳಿಂದಲೂ ಪೂರ್ಣರಾದರು. ಶ್ರೀಹರಿ-ಗುರುಗಳಿಗೆ ಪ್ರೀತಿಪಾತ್ರರಾದರು. ಹೀಗೆ ವಿಷ್ಣುತೀರ್ಥ-ರಿಂದ ಅದೆಷ್ಟೋ ಸಾಧುಗಳು ಸಂಪನ್ನರಾದರು.

**ಯಂ ಯಂ ಜನಃ ಕಾಮಯತೇ ಪುಮರ್ಥಂ**
**ಬಾಹ್ಯಂ ತಥಾಽಭ್ಯಂತರಮಪ್ಯಶೇಷಮ್ ।**
**ಶ್ರೀವಿಷ್ಣುತೀರ್ಥಂ ಸಮುಪಾಸ್ಯ ಸರ್ವಂ**
**ಲಭೇತ ದೇವೋ ದಿವಿಜದ್ರುಮಂ ಯಥಾ ॥3॥**

ಪದಚ್ಛೇದಃ- ಯಂ ಯಂ ಜನಃ ಕಾಮಯತೇ ಪುಮರ್ಥಂ ಬಾಹ್ಯಂ ತಥಾ ಆಭ್ಯಂತರಂ ಅಪಿ ಅಶೇಷಂ

Rarest Archive

ಶ್ರೀವಿಷ್ಣುತೀರ್ಥಂ ಸಮುಪಾಸ್ಯ ಸರ್ವಂ ಲಭೇತ ದೇವಃ ದಿವಿಜದ್ರುಮಂ ಯಥಾ ॥3॥

ಅನ್ವಯಾರ್ಥಃ- **ದೇವಃ** ಕಲ್ಪವೃಕ್ಷಕ್ಕೆ ಅಭಿಮಾನಿಯಾದ ದೇವತೆಗಿಂತಲೂ ಸಣ್ಣವರಾದ ದೇವತೆಗಳು **ದಿವಿಜದ್ರುಮಂ ಯಥಾ** ಕಲ್ಪವೃಕ್ಷವನ್ನು ಆಶ್ರಯಿಸಿ ತಮ್ಮ ಅಪೇಕ್ಷೆಗಳನ್ನೂ ಪೂರ್ಣ ಮಾಡಿಕೊಳ್ಳುವಂತೆ **ಜನಃ** ಎಲ್ಲ ಜನರೂ **ಬಾಹ್ಯಂ** ಲೌಕಿಕವಾದ **ತಥಾ** ಹಾಗೆಯೇ **ಆಭ್ಯಂತರಂ ಅಪಿ** ಮನಸ್ಸಿಗೆ ಹಿತವಾದ **ಅಶೇಷಂ** ಎಲ್ಲ **ಯಂ ಯಂ ಪುಮರ್ಥಂ** ಯಾವ ಯಾವ ಪುರುಷಾರ್ಥಗಳನ್ನು **ಕಾಮಯತೇ** ಅಪೇಕ್ಷಿಸುವರೋ **ತಂ ತಂ ಸರ್ವಂ** ಆ ಎಲ್ಲ ಪುರುಷಾರ್ಥಗಳನ್ನೂ **ಶ್ರೀವಿಷ್ಣುತೀರ್ಥಂ** ವೈರಾಗ್ಯಸಂಪನ್ನರಾದ ಶ್ರೀವಿಷ್ಣುತೀರ್ಥರನ್ನು **ಸಮುಪಾಸ್ಯ** ಭಕ್ತಿ-ಶ್ರದ್ಧಾಗಳಿಂದ ಆರಾಧಿಸಿ **ಲಭೇತ** ಪಡೆಯುತ್ತಾರೆ. ॥3॥

ತಾತ್ಪರ್ಯ- ಅತಿಸಮರ್ಥವಾದದ್ದು ಕಲ್ಪವೃಕ್ಷ. ದೇವಲೋಕದಲ್ಲಿಯ ವೃಕ್ಷರಾಜ. ಸಣ್ಣ ಸಣ್ಣ ದೇವತೆಗಳ ಪಾಲಿನ ವರ. ಎಲ್ಲ ದೇವತೆಗಳೂ ಆ ವೃಕ್ಷವನ್ನು ಆರಾಧಿಸುತ್ತಾರೆ. ತಮ್ಮ ವಿಹಿತವಾದ ಹಿತವಾದ ಅಭೀಷ್ಟಗಳನ್ನು ಪೂರ್ಣ ಮಾಡಿಕೊಳ್ಳುತ್ತಾರೆ. ಎಲ್ಲಿ ವಿಹಿತವಾದ ಹಿತವಾದ ಅಭೀಷ್ಟಗಳು ಪೂರ್ಣವಾಗುತ್ತವೋ ಅದುವೇ ಸ್ವರ್ಗ. ಆ ಲೋಕ ನಿರಾತಂಕವಾಗುತ್ತದೆ. ನಿರಾತಂಕವಾದ ಲೋಕವೇ ಸ್ವರ್ಗ.

Rarest Archiver

ಇದು ಭೂಲೋಕ. ಆದರೂ ಇದು ಸ್ವರ್ಗ. ಇಲ್ಲಿಯೂ ಹಿತವಾದ ವಿಹಿತವಾದ ಅಪೇಕ್ಷೆಯುಳ್ಳ ಜನರೂ ಅನೇಕರಿದ್ದಾರೆ. ಇಂಥ ಜನರಿಂದಲೇ ಲೋಕವು ಸುಭಿಕ್ಷವಾಗುತ್ತದೆ. ಇವರ ಅಪೇಕ್ಷೆಗಳು ಈಡೇರುತ್ತ ಇರಬೇಕು. ಇವರು ನಿರಾತಂಕರಾಗಿ ಇರಬೇಕು. ಇವರ ಅಪೇಕ್ಷೆಗಳನ್ನು ಪೂರ್ಣ ಮಾಡುವ ಕಲ್ಪವೃಕ್ಷ ಒಂದು ಇದೆ. ಅದುವೇ ವಿಷ್ಣುತೀರ್ಥಕಲ್ಪವೃಕ್ಷ. ಯೋಗ್ಯರಿಗೆ ಯೋಗ್ಯವಾದ ಅಭೀಷ್ಟಗಳನ್ನು ನೀಡುವಲ್ಲಿ ಸಮರ್ಥರು ಶ್ರೀವಿಷ್ಣುತೀರ್ಥರು. ಲೌಕಿಕವಾದ ಸಂಪತ್ತನ್ನೂ ನೀಡುತ್ತಾರೆ. ಅದರಿಂದ ಹೊರಗಿನ ಇಂದ್ರಿಯಗಳು ಸಂತುಷ್ಟವಾಗುತ್ತವೆ. ಆದರೆ ಮನಸ್ಸಿಗೆ ಹಿತವಾಗುವುದಿಲ್ಲ. ಜ್ಞಾನ-ಭಕ್ತಿ-ವೈರಾಗ್ಯ, ಶ್ರವಣ-ಮನನ ಮುಂತಾದವುಗಳು ಮನಸ್ಸಿಗೆ ಮುದ ನೀಡುತ್ತವೆ. ಇಂಥ ಸಂಪತ್ತುಗಳು ಅಭಿವೃದ್ಧಿಯಾಗುವಂತೆಯೂ ಶ್ರೀವಿಷ್ಣು-ತೀರ್ಥರು ಅನುಗ್ರಹಿಸುತ್ತಾರೆ. ಅಂತೂ ಭೂಲೋಕದ ಕಲ್ಪವೃಕ್ಷವಾಗಿದ್ದಾರೆ. ಈ ಮೂಲಕ ಭೂಲೋಕವನ್ನು ಸ್ವರ್ಗಲೋಕವನ್ನಾಗಿಸಿದ್ದಾರೆ. ಅಂಥ ವಿಷ್ಣುತೀರ್ಥರನ್ನು ಸದಾ ಸೇವಿಸುತ್ತೇನೆ.

ಸ್ವಭಕ್ತಸಂತಾಪದುರಿಷ್ಟಹಂತಾ
ಸ್ವಭಕ್ತಸಂವಾಂಛಿತಸರ್ವದಾತಾ ।
ಸನ್ನ್ಯಸ್ಯ ಬುದ್ಧ್ಯಾ ಚ ಸದೈವ ದೀಪ್ಯತೇ
ಯೋ ವಿಷ್ಣುತೀರ್ಥೋಽಹಮಮುಂ ಭಜಾಮಿ ॥4॥

Rarest Archive

ಪದಚ್ಛೇದಃ- ಸ್ವಭಕ್ತಸಂತಾಪದುರಿಷ್ಟಹಂತಾ ಸ್ವಭಕ್ತಸಂವಾಂಛಿತಸರ್ವ- ದಾತಾ ಸನ್ನ್ಯಸ್ಯ ಬುದ್ಧ್ಯಾ ಚ ಸದಾ ಏವ ದೀಪ್ಯತೇ ಯಃ ವಿಷ್ಣುತೀರ್ಥಃ ಅಹಂ ಅಮುಂ ಭಜಾಮಿ ||4||

ಅನ್ವಯಾರ್ಥಃ- **ಯಃ ವಿಷ್ಣುತೀರ್ಥಃ** ಯಾವ ವಿಷ್ಣುತೀರ್ಥರು **ಸ್ವಭಕ್ತಸಂತಾಪದುರಿಷ್ಟಹಂತಾ** ತಮ್ಮ ಭಕ್ತರ ಸಂತಾಪಗಳಿಗೆ ಕಾರಣವಾದ ಅನಿಷ್ಟಗಳಾದ ಪಾಪಗಳನ್ನು ನಾಶ ಮಾಡುವರೋ **ಸ್ವಭಕ್ತ-ಸಂವಾಂಛಿತಸರ್ವದಾತಾ** ತಮ್ಮ ಭಕ್ತರ ವಿಹಿತವಾದ ಎಲ್ಲ ಅಪೇಕ್ಷೆಗಳನ್ನು ಪೂರ್ಣ ಮಾಡುತ್ತಾರೋ **ಚ** ಮತ್ತು **ಬುದ್ಧ್ಯಾ** ಬುದ್ಧಿಯಲ್ಲಿ **ಸದಾ** ಯಾವಾಗಲೂ **ಸನ್ನ್ಯಸ್ಯ ಏವ** ಎಲ್ಲ ವಿಷಯಗಳನ್ನು ಪರಿತ್ಯಜಿಸಿಯೇ **ದೀಪ್ಯತೇ** ಪ್ರಕಾಶಮಾನರಾಗಿರುವರೋ **ತಂ ಅಮುಂ** ಅಂಥ ವಿಷ್ಣುತೀರ್ಥರನ್ನು **ಅಹಂ** ನಾನು **ಭಜಾಮಿ** ಸೇವಿಸುತ್ತೇನೆ.

ತಾತ್ಪರ್ಯ- ಶ್ರೀವಿಷ್ಣುತೀರ್ಥರು ಭಕ್ತರ ಅಭೀಷ್ಟಗಳನ್ನು ಮಾತ್ರ ಪೂರ್ಣಗೊಳಿಸಿ ಕೃತಕೃತ್ಯರಾಗಿ ಕೂಡುವುದಿಲ್ಲ. ಲೌಕಿಕವಾದ ಬಯಕೆಗಳು ಭಕ್ತರಿಗೆ ಬಾರದೇ ಇರುವಂತೆ ಅನುಗ್ರಹಿಸುತ್ತಾರೆ.

ತಾನು ಮಾಡಿದ ಪಾಪಗಳು ಲೌಕಿಕವಾದ ಸುಖವನ್ನು ಪಡೆಯುವಂತೆ ಪ್ರೇರಿಸುತ್ತವೆ. ಆ ಪ್ರೇರಣೆಗೆ ಬದ್ಧನಾದ ಜೀವ ಯಾರ ಮಾತನ್ನೂ ಕೇಳುವುದಿಲ್ಲ. ಆ ಅಪೇಕ್ಷೆಗಳು ಪೂರ್ಣ ಮಾಡಿದವರ ಮಾತನ್ನೇ ಕೇಳುತ್ತಾನೆ.

Rarest Archiver

ನಮ್ಮ ಈ ಪರಿಸ್ಥಿತಿ ವಿಷ್ಣುತೀರ್ಥರಿಗೆ ಗೊತ್ತು . ಹೀಗಾಗಿ ನಮ್ಮ ಅಪೇಕ್ಷೆಗಳನ್ನು ಪೂರ್ಣ ಮಾಡುತ್ತಾರೆ. ನಮ್ಮ ದುರಿತಗಳನ್ನು ದೂರ ಮಾಡುತ್ತಾರೆ. ತಮ್ಮ ಭಕ್ತರನ್ನಾಗಿ-ಸಿಕೊಳ್ಳುತ್ತಾರೆ. ನಂತರ ದೇವರ ಭಕ್ತರನ್ನಾಗಿಸುತ್ತಾರೆ. ದೇವರಿಗಾಗಿ ಎಲ್ಲರನ್ನೂ, ಎಲ್ಲವನ್ನೂ ತೊರೆಯುವ ಧೈರ್ಯವನ್ನು ನಮ್ಮಲ್ಲಿ ಬೆಳೆಸುತ್ತಾರೆ. ನಮ್ಮನ್ನು ಪರಿಶುದ್ಧರನ್ನಾಗಿಸಿ ದೇವರಿಗೆ ಸಮರ್ಪಿಸುತ್ತಾರೆ.

ಆದರೇ ಅವರು ಮಾತ್ರ ಯಾವ ಲೌಕಿಕಕ್ಕೂ ವಶರಾಗುವುದಿಲ್ಲ. ಬುದ್ಧಿಪೂರ್ವಕವಾಗಿಯೇ ಸರ್ವವನ್ನೂ ತೊರೆದಿದ್ದಾರೆ. ವಿರಕ್ತಶಿಖಾಮಣಿ-ಗಳಾಗಿದ್ದಾರೆ. ಎಲ್ಲ ಕಡೆ ವಿಖ್ಯಾತರಾಗಿದ್ದಾರೆ. ಅಂಥ ಶ್ರೀವಿಷ್ಣುತೀರ್ಥರನ್ನು ಭಕ್ತಿಯಿಂದ ಭಜಿಸುತ್ತೇನೆ.

**ಕೌಪೀನದಂಡಾಜಿನಪಾದಪೀಠ-**
**ಕಮಂಡಲುಂ ಸತ್ಕಮಠಾಸನಸ್ಥಮ್ ।**
**ಇತ್ಥಂ ಯತಿಂ ಚಿಂತಯತಃ ಪುಮರ್ಥಂ**
**ನಿತ್ಯಂ ದಿಶಂತಂ ಗುರುವಿಷ್ಣುತೀರ್ಥಮ್ ॥5॥**

ಪದಚ್ಛೇದಃ- ಕೌಪೀನದಂಡಾಜಿನಪಾದಪೀಠ-ಕಮಂಡಲುಂ ಸತ್ಕಮಠಾಸನಸ್ಥಂ ಇತ್ಥಂ ಯತಿಂ ಚಿಂತಯತಃ ಪುಮರ್ಥಂ ನಿತ್ಯಂ ದಿಶಂತಂ ಗುರುವಿಷ್ಣುತೀರ್ಥಂ ॥5॥

ಅನ್ವಯಾರ್ಥಃ- **ಕೌಪೀನದಂಡಾಜಿನಪಾದ-ಪೀಠಕಮಂಡಲುಂ** ಕೌಪೀನ-ದಂಡ-ಅಜಿನಗಳನ್ನು

Rarest Archive

ಧರಿಸಿದ **ಸತ್ಕಮಾಸನಸ್ಥಂ** ಪರಿಶುಭ್ರವಾದ ಕೂರ್ಮಾಸನದಲ್ಲಿ ವಿರಾಜಮಾನರಾದ **ಯತಿಂ** ಯತಿಗಳಾದ ವಿಷ್ಣುತೀರ್ಥರನ್ನು **ಇತ್ಥಂ** ಈ ರೀತಿಯಾಗಿ **ಚಿಂತಯತಃ** ಚಿಂತಿಸುವ ಸದ್ಭಕ್ತರಿಗೆ **ನಿತ್ಯಂ** ನಿತ್ಯವಾದ ಶಾಶ್ವತವಾದ **ಪುಮರ್ಥಂ** ಮುಕ್ತಿಯನ್ನು (ಮುಕ್ತಿಪ್ರದವಾದ ಶಾಸ್ತ್ರವನ್ನು) **ದಿಶಂತಂ** ಉಪದೇಶ ಮಾಡುತ್ತಿರುವ **ಗುರುವಿಷ್ಣುತೀರ್ಥಂ** ಗುರುಗಳಾದ ವಿಷ್ಣುತೀರ್ಥರನ್ನು **ಅಹಂ** ನಾನು **ಭಜಾಮಿ** ಸೇವಿಸುತ್ತೇನೆ.

ತಾತ್ಪರ್ಯ- ವಿಷ್ಣುತೀರ್ಥರು ಎಲ್ಲವನ್ನು ತೊರೆದ ಧೀರರು. ಕೌಪೀನ-ದಂಡ-ಅಜಿನ-ಪಾದಪೀಠ-ಕಮಂಡಲುಗಳನ್ನು ಮಾತ್ರ ಧರಿಸಿದ್ದಾರೆ. ಯಾವಾಗಲೂ ಕೂರ್ಮಾಸನದಲ್ಲಿ ವಿರಾಜಮಾನರಾಗಿದ್ದಾರೆ. ಶ್ರೀವಿಷ್ಣುತೀರ್ಥರ ಗುಣಗಳನ್ನು ಈ ಹಿಂದೆ ಹೇಳಿದಂತೆ ಸದಾ ಸ್ಮರಿಸಬೇಕು. ಅಂಥವರನ್ನು ಉದ್ಧರಿಸುತ್ತಾರೆ. ಮೋಕ್ಷಪ್ರದವಾದ ಶಾಸ್ತ್ರದ ಶ್ರವಣ-ಮನನಗಳು ಆಗುವಂತೆ ಆ ಭಕ್ತರಿಗೆ ಅನುಕೂಲ ಮಾಡಿಕೊಡುತ್ತಾರೆ. ಅಂಥ ಗುರುಗಳನ್ನು ಶ್ರದ್ಧೆಯಿಂದ ಆರಾಧಿಸುತ್ತೇನೆ.

**ಯಸ್ಯಪ್ರಚಂಡತಪಸಾ ಶ್ರುತಿಗೀತವೃತ್ತ-**
**ಸ್ತುಷ್ಟೋ ಹರಿಃ ಕಿಲ ವಶಂವದತಾಮವಾಪ ।**
**ಶ್ರೀಮಧ್ವಸನ್ಮತಪಯೋನಿಧಿಪೂರ್ಣಚಂದ್ರಃ**
**ಶ್ರೀವಿಷ್ಣುತೀರ್ಥಮುನಿರಾಣ್ಮುದಮಾತನೋತು ॥6॥**

Rarest Archives

ಪದಚ್ಛೇದಃ- ಯಸ್ಯ ಪ್ರಚಂಡತಪಸಾ ಶ್ರುತಿಗೀತವೃತ್ತಃ ತುಷ್ಟಃ ಹರಿಃ ಕಿಲ ವಶಂವದತಾಂ ಅವಾಪ ಶ್ರೀಮಧ್ವಸನ್ಮತಪಯೋನಿಧಿಪೂರ್ಣಚಂದ್ರಃ ಶ್ರೀವಿಷ್ಣುತೀರ್ಥಮುನಿರಾಟ್ ಮುದಂ ಆತನೋತು ॥6॥

ಅನ್ವಯಾರ್ಥಃ- **ಶ್ರುತಿಗೀತವೃತ್ತಃ** ವೇದಗಳಿಂದ ಗೇಯವಾದ ಚರಿತೆಯುಳ್ಳ **ಹರಿಃ** ಶ್ರೀಹರಿಯು **ಯಸ್ಯ** ಯಾವ ವಿಷ್ಣುತೀರ್ಥರ **ಪ್ರಚಂಡತಪಸಾ** ಪ್ರಚಂಡವಾದ ತಪಸ್ಸಿನಿಂದ **ತುಷ್ಟಃ** ಸಂತುಷ್ಟನಾಗಿ **ವಶಂವದತಾಂ** **ಅವಾಪ** ಅವರಿಗೆ ಅಧೀನನಂತೆ ಆದನೋ **ಕಿಲ** ಆಶ್ಚರ್ಯ **ಶ್ರೀಮಧ್ವಸನ್ಮತಪಯೋನಿಧಿಪೂರ್ಣಚಂದ್ರಃ** ಶ್ರೀಮಧ್ವಮತವೆಂಬ ಪರಿಶುದ್ಧವಾತ ಮತವೆಂಬ ಸಮುದ್ರದ ಅಭಿವೃದ್ಧಿಗೆ ಪೂರ್ಣಚಂದ್ರನಂತೆ ಇರುವ **ಶ್ರೀವಿಷ್ಣುತೀರ್ಥಮುನಿರಾಟ್** ಮುನಿಶ್ರೇಷ್ಠರಾದ ಶ್ರೀವಿಷ್ಣುತೀರ್ಥರು **ಮುದಂ** ಸಂತೋಷವನ್ನು **ಆತನೋತು** ಉಂಟುಮಾಡಲಿ. ॥6॥

ತಾತ್ಪರ್ಯ- ಭಗವಂತ ವೇದೈಕಗಮ್ಯ. ಆತನ ಚರಿತೆಯನ್ನು ಆನಂದದಿಂದ ಆರಾಧಿಸಿದ ಮಹಾನುಭಾವರು ಶ್ರೀವಿಷ್ಣುತೀರ್ಥರು. ಆ ದೇವರನ್ನು ಒಲಿಸಿಕೊಳ್ಳಲು ತಪಸ್ಸು ಮಾಡಿದರು. ಆ ತಪಸ್ಸು ಉಗ್ರವಾಯಿತು. ಶ್ರೀಹರಿಯು ಸಂತುಷ್ಟನಾದ. ವಿಷ್ಣುತೀರ್ಥರ ವಶನಾದ ವಿಷ್ಣು.

Rarest Archiver

ಪರಮಾತ್ಮ ಸ್ವತಂತ್ರ. ಆದರೂ ಭಕ್ತಪರತಂತ್ರ-ನಾಗುತ್ತಾನೆ. ಎಲ್ಲರಿಗೂ ಆಶ್ಚರ್ಯವಾಗುತ್ತಾನೆ.

ಹೀಗೆ ವಿಷ್ಣುತೀರ್ಥರ ವಶನಾದ ಪರಮಾತ್ಮ ಅವರ ಎಲ್ಲ ಅಪೇಕ್ಷೆಗಳನ್ನು ಪೂರ್ಣ ಮಾಡಿದ. ವಿಷ್ಣುತೀರ್ಥರ ಹತ್ತಿರವೇ ಸುಳಿದ. ಅವರು ಹೋದಲ್ಲಿಗೆ ಹೋದ. ಕುಳಿತಲ್ಲಿ ಕುಳಿತ. ಚಿಂತಿಸಿದಲ್ಲಿ ಚಿಂತ್ಯನಾದ. ಪೂಜಿಸಿದಲ್ಲಿ ಪೂಜ್ಯನಾದ.

ಒಟ್ಟಾರೆ ವಿಷ್ಣುತೀರ್ಥರನ್ನು ಬಿಟ್ಟು ಹೋಗದಂಥ ಪರಿಸ್ಥಿತಿ ದೇವರದ್ದಾಯಿತು. ಹೀಗೆ ಭಗವಂತನನ್ನು ಒಲಿಸಿಕೊಂಡ ಸಮರ್ಥರು ಶ್ರೀವಿಷ್ಣುತೀರ್ಥರು.

ಶ್ರೀಮದಾಚಾರ್ಯರ ಸಚ್ಛಾಸ್ತ್ರಗಳ ಪಾಠಪ್ರವಚನ-ಗಳನ್ನು ನಿರಂತರ ಮಾಡಿದರು. ಶ್ರೀಮನ್ನ್ಯಾಯಸುಧಾ ಗ್ರಂಥವನ್ನು 108 ಬಾರಿ ಪಾಠ ಮಾಡಿದರು. ಇಂಥ ತಪಸ್ಸನ್ನು ಮಾಡಿದರು. ಶ್ರೀಮನ್ಮಧ್ವಶಾಸ್ತ್ರದ ಅಭಿವೃದ್ಧಿಗೆ ಪೂರ್ಣಚಂದ್ರರಂತೆ ಕಂಗೊಳಿಸಿದರು. ಇದರಿಂದಲೇ ಪರಮಾತ್ಮ ಸಂತುಷ್ಟನಾದ. ಇಂಥ ವಿಷ್ಣುತೀರ್ಥಮುನಿ-ರಾಜರನ್ನು ಅನವರತ ಆರಾಧಿಸುತ್ತೇನೆ. ಮೋದಾಪುರ-ನಿವಾಸಿಗಳಾದ ಶ್ರೀವಿಷ್ಣುತೀರ್ಥರು ನಮಗೆ ಮುದ ನೀಡಲಿ.

ಇದಂ ಸ್ತೋತ್ರಂ ಪಠನ್ನರ್ಚನ್ನಮನ್ ವೃಂದಾವನಂ ಗುರೋಃ ।
ತ್ರಿವಾರಂ ಲಭತೇ ಕಾಮಾನ್ ಸರ್ವಾನ್ ನಾರ್ಯಥವಾ ಪುಮಾನ್ ॥7॥

Rarest Archive

ಪದಚ್ಛೇದಃ- ಇದಂ ಸ್ತೋತ್ರಂ ಪಠನ್ ಅರ್ಚನ್ ನಮನ್ ವೃಂದಾವನಂ ಗುರೋಃ ತ್ರಿವಾರಂ ಲಭತೇ ಕಾಮಾನ್ ಸರ್ವಾನ್ ನಾರೀ ಅಥವಾ ಪುಮಾನ್ ।।7।।

ಅನ್ವಯಾರ್ಥಃ- **ನಾರೀ** ಸ್ತ್ರೀಯರು **ಅಥವಾ** ಅಥವಾ **ಪುಮಾನ್** ಪುರುಷರು **ಇದಂ ಸ್ತೋತ್ರಂ** ಈ ಸ್ತೋತ್ರವನ್ನು **ತ್ರಿವಾರಂ** ಮೂರುಬಾರಿ **ಪಠನ್** ಪಠಿಸುತ್ತಾ **ಗುರೋಃ** ಗುರುಗಳ **ವೃಂದಾವನಂ** ವೃಂದಾವನವನ್ನು **ಅರ್ಚನ್** ಅರ್ಚಿಸುತ್ತಾ **ನಮನ್** ನಮಸ್ಕರಿಸುತ್ತಾ **ಸರ್ವಾನ್ ಕಾಮಾನ್** ಎಲ್ಲ ಅಭೀಷ್ಟಗಳನ್ನು **ಲಭತೇ** ಪಡೆಯುತ್ತಾರೆ. ।।7।।

ತಾತ್ಪರ್ಯ- ಶ್ರೀವಿಷ್ಣುತೀರ್ಥರ ಪೂರ್ವಾಶ್ರಮದ ಪುತ್ರರಾದ ಶ್ರೀ ಕೃಷ್ಣಾಚಾರ್ಯರು ರಚಿಸಿದ ಸ್ತೋತ್ರ ಇದು. (58 ಶ್ಲೋಕಗಳಷ್ಟು ದೀರ್ಘವಾಗಿದೆ ಈ ಸ್ತೋತ್ರ. ಆ ಸ್ತೋತ್ರವನ್ನು ಕಂಠಪಾಠ ಮಾಡುವಷ್ಟು ಅಥವಾ ಪಾರಾಯಣ ಮಾಡುವಷ್ಟು ಮೂರು ಬಾರಿ ಪಾರಾಯಣ ಮಾಡುವುದು ಪಲಾಯನವಾದಿಗಳಾದ ನಮಗೆ ಸಾಧ್ಯವಿಲ್ಲ. ಅಲ್ಪರಾದ ನಮ್ಮಂಥವರಿಗೆ ಅನುಕೂಲವಾಗಲಿ ಎಂಬುದಕ್ಕಾಗಿ ಸಂಗ್ರಹ ಮಾಡಿದ್ದೇನೆ. ಭಾಗವತ, ಭಗವದ್ಗೀತಾಸಾರೋದ್ಧಾರಗಳನ್ನು ಮಾಡಿದ ಮಹಾನುಭಾವರು ಶ್ರೀವಿಷ್ಣುತೀರ್ಥರು. ಅವರ ಸ್ತುತಿಯ ಸಾರೋದ್ಧಾರ ಇದು. ಇದರಿಂದ ಅವರು ಸಂಪ್ರೀತರಾಗಲಿ) ಈ ಸ್ತೋತ್ರವನ್ನು ಸ್ತ್ರೀಯರಾಗಲೀ

Rarest Archiver

ಪುರುಷರಾಗಲೀ ಪಾರಾಯಣ ಮಾಡಬಹುದು. ಈ ಸ್ತೋತ್ರವನ್ನು ಪಠಿಸುತ್ತಾ ವೃಂದವನಕ್ಕೆ ಪ್ರದಕ್ಷಿಣೆ-ನಮಸ್ಕಾರಗಳನ್ನು ಹಾಕಬೇಕು. ಈ ಮೂಲಕ ವೃಂದಾವನದ ಸೇವೆಯನ್ನು ಮಾಡಬೇಕು. ಈ ಸ್ತೋತ್ರವನ್ನು ಪಠಿಸುತ್ತಲೇ ಅವರಿಗೆ ನಮಸ್ಕರಿಸಬೇಕು. ಮೂರು ಬಾರಿ ಈ ಸ್ತೋತ್ರವನ್ನು ಪಾರಾಯಣ ಮಾಡುವುದರಿಂದ ಎಲ್ಲ ಅಭೀಷ್ಟಗಳನ್ನು ಪಡೆಯಬಹುದಾಗಿದೆ.

ಇತಿ ಶ್ರೀಕೃಷ್ಣಾರ್ಯಕೃತ ಶ್ರೀಮದ್ವಿಷ್ಣುತೀರ್ಥಗುರುಸ್ತೋತ್ರಮ್ ॥



Rarest Archiver